ಶ್ರೀ ಬಿ. ಶಿವರಾಮ್: ಮಾನ್ಯ ಅಧ್ಯಕ್ಷರೆ, ನನಗೆ ರೆಕಾರ್ಡ್ ಸರಿಯಾಗಿರಬೇಕು. ನಾನು ಇಲ್ಲಿ ಎಲ್‌ಒಸಿ ವಿಚಾರ ಪ್ರಸ್ತಾಪ ಮಾಡಿಲ್ಲ. ಇನ್‌ಸ್ಪೆಕ್ಷನ್ ವಿಚಾರ ಮಾತ್ರ ಪ್ರಸ್ತಾಪ ಮಾಡಿದ್ದೇನೆ. ಬೇರೆಯವರು ಉತ್ತರ ಹೇಳಿ, ಎಲ್‌ಒಸಿ ಕಡೆಗೆ ದಾರಿ ತಪ್ಪಿಸುವ ಕೆಲಸ ಅಲ್ಲ ಇಲ್ಲಿ. ಅಧಿಕಾರಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಗಳು ಮನಸೋ ಇಚ್ಛೆ ನಡೆದುಕೊಳ್ಳುತ್ತಾರೆ. ಎಲ್‌ಒಸಿ ಅಲ್ಲಿಂದ ಬಂದಿತ್ತು, ಇಲ್ಲಿಂದ ಬಂದಿತ್ತು ಎಂದು ಹೇಳಿದರೆ ನಾನು ದಡ್ಡ ಅಲ್ಲ. ನಾನೂ ತಿಳಿದುಕೊಂಡಿದ್ದೇನೆ. ಇವರ ನಡವಳಿಕೆಗಳನ್ನು ನೋಡಿ, ಇಲ್ಲಿಯವರೆಗೆ ಇದೊಂದೇ ವಿಚಾರ ಅಲ್ಲ. ಜಿಲ್ಲೆಯಲ್ಲಿ ಇಂತಹ ನೂರಾರು ವಿಚಾರಗಳು ಇವೆ.

ಅಧ್ಯಕ್ಷರು: ಶಿವರಾಮ್‌ರವರೇ, ನೀವು ಏನೋ ಒಂದು ವಿಚಾರ ಎತ್ತಿದಿರಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಮಾಡದೇ ಇದ್ದರೆ ಮತ್ತೆ ಈ ಸಭೆಯಲ್ಲಿ ಎತ್ತುವುದಕ್ಕೆ ಅವಕಾಶ ಇದೆ.

ಶ್ರೀ ಬಿ. ಶಿವರಾಮ್: ಮಾನ್ಯ ಮುಖ್ಯಮಂತ್ರಿಗಳು 15 ದಿವಸಗಳಲ್ಲಿ ಮಾಡಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ ಎಂದರೆ, ಯಾರಿಗೆ ಬೇಕಾದರೂ ಅರ್ಥವಾಗುತ್ತದೆ. ಈ ಸದನದಲ್ಲಿ ಏಕೆ ಹೇಳುತ್ತಿಲ್ಲವೆಂಬುದು ಸದನ ಅರ್ಥ ಮಾಡಿಕೊಳ್ಳಲಿ ಸಾಕು.

(ಇ) ವಿಷಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ವಾಹನ ದಟ್ಟಣೆ ಕುರಿತು.

ಶ್ರೀ ಕೆ. ಚಂದ್ರಶೇಖರ್(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ವಾಹನಗಳ ಸಂಚಾರ ಹೆಚ್ಚುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ(ಮುಖ್ಯಮಂತ್ರಿಗಳು): ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯು ತ್ವರಿತ ಗತಿಯಲ್ಲಿ ಬೆಳೆಯುತ್ತಿರುತ್ತದೆ. ಪ್ರತಿ ದಿನ ಸುಮಾರು 900 ವಾಹನಗಳು ನೊಂದಣಿಯಾಗುತ್ತಲಿದೆ. 1996ರಲ್ಲಿ ಸುಮಾರು 10 ಲಕ್ಷದಷ್ಟಿದ್ದ ವಾಹನ ಸಂಖ್ಯೆಯು ಇದೀಗ 23 ಲಕ್ಷಕ್ಕೂ ಮೀರಿದೆ. ಇದರ ಪರಿಣಾಮವಾಗಿ ನಗರದ ರಸ್ತೆಗಳು ತೀವ್ರ ಒತ್ತಡಕ್ಕೆ ಸಿಲುಕಿವೆ. ನಗರದ ಬಹುಪಾಲು ಪ್ರಮುಖ ರಸ್ತೆಗಳಾದ ಹೊಸೂರು ರಸ್ತೆ, ಏರ್‌ಪೋರ್ಟ್ ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಹಳೇ ಮದ್ರಾಸ್ ರಸ್ತೆ, ತುಮಕೂರು ರಸ್ತೆ ಮುಂತಾದವುಗಳು ತಮ್ಮ ಸಾಮರ್ಥ್ಯಕ್ಕಿಂತ 1 $^{1}/_{2}$ ರಿಂದ 2 ಪಟ್ಟು ಹೆಚ್ಚು ವಾಹನಗಳನ್ನು ಸಾಗಿಸುತ್ತಿರುತ್ತವೆ, ಪರಿಣಾಮವಾಗಿ ನಗರದಲ್ಲಿ ತೀವ್ರ ಸಂಚಾರ ದಟ್ಟಣೆಯ (ಸಂಚಾರದ ಒತ್ತಡದ) ಅನುಭವವಾಗುತ್ತಿದೆ.

ಪರಿಸ್ಥಿತಿಯ ಸುಧಾರಣೆಗಾಗಿ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದ್ದು; (1) ಡೈರಿ ವೃತ್ತ, ರಾಜಾಜಿನಗರ ಪ್ರದೇಶ ದ್ವಾರ (ಕೆಳಸೇತುವೆ), ಮೋದಿ ಆಸ್ಪತ್ರೆ ಜಂಕ್ಷನ್, ಆನಂದರಾವ್ ವೃತ್ತ ಮುಂತಾದ ಕಡೆಗಳಲ್ಲಿ ಹಲವಾರು ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಿದ್ದು ಹಾಗೂ ಏರ್‌ಪೋರ್ಟ್ ರಸ್ತೆ ಮತ್ತು ಜಯದೇವ ಆಸ್ಪತ್ರೆ ಬಳಿಯ ಮೇಲ್ಸೇತುವೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲಿದೆ. ಟ್ಯಾಗೂರ್ ವೃತ್ತ, ಆರ್.ವಿ. ಟೀಚರ್ಸ್ ಕಾಲೇಜ್ ವೃತ್ತ ಮತ್ತು ಯಶವಂತಪುರ

ವೃತ್ತಗಳಲ್ಲಿ ಮೇಲ್ಸೇತುವೆಗಳನ್ನು ನಿರ್ಮಿಸಲಾಗುವುದು. ರಾಮಕೃಷ್ಣ ಆಶ್ರಮ ವೃತ್ತದ ಮೇಲ್ಸೆತುವೆ ನಿರ್ಮಾಣವನ್ನು ಸ್ಥಳೀಯ ನಾಗರೀಕರು ಎತ್ತಿರುವ ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು. (2) ಸರ್ಕಾರವು ಸಾರ್ವಜನಿಕ ಸಾರಿಗೆ ವಿಷಯದಲ್ಲಿ ಪ್ರಮುಖ ಅಭಿವೃದ್ಧಿ ಕ್ರಮಗಳನ್ನು ಕೈಗೊಂಡಿದ್ದು ಮೆಟ್ರೋ ಮಾಸ್ ರ್ಯಾಪಿಡ್ ಟ್ರಾನಿಟ್ ಸಿಸ್ಟಮ್ ಯೋಜನೆಯನ್ನು ಒಳಗೊಂಡಿರುತ್ತದೆ. (3) ಪ್ರಧಾನ ಹೊರ ವರ್ತುಲ ರಸ್ತೆಯ ನಿರ್ಮಾಣವು ಯೋಜನೆಯಲ್ಲಿದೆ. (4) ನಗರದ ಎಲ್ಲಾ ಮುಖ್ಯ ರಸ್ತೆಗಳು ಮತ್ತು ಒಳಚರಂಡಿ ವ್ಯವಸ್ಥೆಗಳ ದುರಸ್ತಿ ಕಾರ್ಯ ಹಾಗೂ ರಸ್ತೆಗಳ ಡಾಂಬರೀಕರಣ ಮಾಡಲಾಗುತ್ತಿದೆ. (5) ಸಂಚಾರ ನಿಯಂತ್ರಣ ವ್ಯವಸ್ಥೆಯನ್ನು ಉತ್ತಮ ಪಡಿಸುವ ಸಲುವಾಗಿ ಸಂಚಾರ ಪೊಲೀಸ್ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಳ ಮಾಡಿದ್ದು 992 ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಅಧಿಕಾರಿಗಳ ಹುದ್ದೆಯನ್ನು ಮಂಜೂರು ಮಾಡಲಾಗಿದೆ. ಇನ್ನೂ ಹೆಚ್ಚಿನ ಸಂಚಾರ ಸಿಬ್ಬಂದಿಯ ಅವಶ್ಯಕತೆಯನ್ನು ಆಶಾದಾಯಕವಾಗಿ ಪರಿಗಣಿಸಲಾಗುತ್ತಿದೆ. (6) ರಸ್ತೆ ಬಳಕೆದಾರರುಗಳಲ್ಲಿ ಶಿಸ್ತನ್ನು ಮೂಡಿಸುವ ಸಲುವಾಗಿ ಸಂಚಾರ ಪೊಲೀಸರು ಮೋಟಾರು ವಾಹನಗಳ ಕಾಯ್ದೆ ಮತ್ತು ನಿಯಮಗಳ ಪರಿಣಾಮಕಾರಿ ಜಾರಿ ಕ್ರಮಗಳನ್ನು ಕೈಗೊಳ್ಳುತ್ತಿರುತ್ತಾರೆ. 2005ನೇ ಇಸವಿಯ ವರ್ಷಾವಧಿಗೆ 17 ಲಕ್ಷಕ್ಕೂ ಮೀರಿ ಪ್ರಕರಣಗಳನ್ನು ದಾಖಲಿಸಿ 20 ಕೋಟಿ ರೂಪಾಯಿಗೂ ಮೀರಿ ದಂಡದ ಮೊತ್ತವನ್ನು ವಸೂಲು ಮಾಡಲಾಗಿಸದೆ. (7) ಬರುವ ಹಣಕಾಸು ವರ್ಷದ ಅವಧಿಗೆ ಸಾರ್ವಜನಿಕರಲ್ಲಿ ಸಂಚಾರ ನಿಯಮ ಮತ್ತು ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರಮುಖ ಸಂಚಾರ ಶಿಕ್ಷಣ ಶಿಬಿರವನ್ನು ಹಮ್ಮಿಕೊಳ್ಳಲಾಗುವುದು. (8) ಬೆಂಗಳೂರು ನಗರದ ಸಂಚಾರವನ್ನು ಸುಗಮಗೊಳಿಸುವ ಸಲುವಾಗಿ ಹಲವಾರು ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. (9) 2004ರ 9101 ಪ್ರಕರಣಗಳಿಗೆ ಹೋಲಿಸಿದಾಗ 2005ನೇ ಇಸವಿಯಲ್ಲಿ ರಸ್ತೆ ಅಪಘಾತಗಳನ್ನು 7575ಕ್ಕೆ ಇಳಿದಿದೆ. (10) ಸ್ಥಳೀಯ ಪ್ರದೇಶ ಸಮಿತಿಗಳನ್ನು ರಚಿಸಿದ್ದು ಸ್ಥಳೀಯ ಪ್ರದೇಶ ಸಂಚಾರ ನಿರ್ವಹಣಾ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. (11) 7 ಸ್ಥಳಗಳಲ್ಲಿ ಪೂರ್ವ ನಿಗದಿತ ದರ ಸೂಚಿ ಆಟೋರಿಕ್ಷಾ ನಿಲ್ದಾಣಗಳನ್ನು ಪ್ರಾರಂಭಿಸಿದ್ದು ಶೀಘ್ರದಲ್ಲಿ ಇನ್ನೂ ಕೆಲವೆಡೆಗಳಲ್ಲಿ ಪ್ರಾರಂಭಿಸಲಾಗುವುದು.

ಸರ್ಕಾರವು ಬೆಂಗಳೂರು ನಗರದ ಸಂಚಾರ ಸಮಸ್ಯೆಯನ್ನು ನಿವಾರಿಸುವುದರ ಪ್ರಾಮುಖ್ಯತೆಯನ್ನು ಮನಗೊಂಡಿದೆ. ಈ ಉದ್ದೇಶಕ್ಕಾಗಿ ಅತ್ಯಂತ ಆಶಾದಾಯಕ ಬಿ ಟ್ರಾಕ್ 2010 (ಬೆಂಗಳೂರು ಟ್ರಾಫಿಕ್ ಇಂಪ್ರೂವ್‌ಮೆಂಟ್ ಪ್ರಾಜೆಕ್ಟ್ 2010) ಯೋಜನೆಯನ್ನು ಪರಿಕಲ್ಪಿಸಿದೆ. 2006–07 ರಿಂದ 2010–11 ವರೆಗೆ ಯೋಜನೆಯ ಅವಧಿಯಾಗಿದ್ದು ಒಟ್ಟಾರೆ ರೂ.350 ಕೋಟಿಗಳ ವೆಚ್ಚದ್ದಾಗಿರುತ್ತದೆ. 2006–07ರ ಹಣಕಾಸು ವರ್ಷದ ಅವಧಿಗೆ ರೂ.44 ಕೋಟಿ ನಿಗದಿಪಡಿಸಲಾಗಿರುತ್ತದೆ. ಈ ಯೋಜನೆಯು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಇಂಟಲಿಜಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ (ಐಟಿಎಸ್), ಸಂಚಾರ ಪೊಲೀಸ್ ಸ್ವಯಂ ಚಾಲಿತ ಜಾರಿ ಕೇಂದ್ರದ ಆಧುನೀಕರಣ ಮುಂತಾದವುಗಳನ್ನೊಳಗೊಂಡಿರುತ್ತದೆ.

ಮುಂಬರುವ ಒಂದು ವರ್ಷದ ಅವಧಿಯಲ್ಲಿ ಸುಧಾರಣೆಗಳನ್ನು ಜಾರಿಗೆ ತರುವ ಸಲುವಾಗಿ ಬಿಎಂಪಿ, ಬಿಎಂಟಿಸಿ ಮತ್ತು ಸಂಚಾರ ಪೊಲೀಸರು ಜಾರಿಗೊಳಿಸುವ ಸಲುವಾಗಿ 10 ಅಂಶಗಳ ಅಲ್ಪಾವಧಿ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಈ ಕಾರ್ಯಕ್ರಮವು ರಸ್ತೆಗಳು,

ಸಾರ್ವಜನಿಕ ಸಾರಿಗೆ, ವಾಹನಗಳ ನಿಲುಗಡೆ ನಿರ್ವಹಣೆ, ಪಾದಚಾರಿಗಳ ಸೌಲಭ್ಯ, ಸಂಚಾರ ನಿಯಂತ್ರಣ ಮತ್ತು ಜಾರಿ, ಸಂಚಾರ ನಿರ್ವಹಣೆ ಜಾರಿ ಕ್ರಮಗಳು, ಶಿಕ್ಷಣ ಮತ್ತು ಪ್ರಚಾರ, ಸಾರ್ವಜನಿಕರ ಪಾತ್ರ ನಿರ್ವಹಣೆ ಮತ್ತು ರಸ್ತೆ ಸುರಕ್ಷತೆ ಮುಂತಾದವುಗಳ ಅಭಿವೃದ್ಧಿ ಕ್ರಮಗಳನ್ನೊಳ ಗೊಂಡಿರುತ್ತದೆ.

ಈ ಎಲ್ಲಾ ದೀರ್ಘಾವಧಿ ಮತ್ತು ಅಲ್ಪಾವಧಿ ಕಾರ್ಯಕ್ರಮಗಳಿಂದಾಗಿ ನಗರದ ಸಂಚಾರ ಪರಿಸ್ಥಿತಿಯು ಗಣನೀಯವಾಗಿ ಉತ್ತಮಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಕೆ. ಚಂದ್ರಶೇಖರ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ, ಮಾಹಿತಿಗಳಲ್ಲಿ ಕೆಲವು ವಿಷಯಗಳು ಇವೆ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ. ಬೆಂಗಳೂರು ನಗರದಲ್ಲಿ ಸಂಚಾರ ವ್ಯವಸ್ಥೆಗೆ ಏನು ನಿಗದಿತ ಕಾಲಗಳಿಗೆ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುತ್ತೇವೆಂದು ಏನು ಹೇಳುತ್ತಾರೆ, ಅದು ಅತ್ಯಂತ ಸತ್ಯಕ್ಕೆ ದೂರವಾದ ವಿಷಯವಾಗಿದೆ. ಬೆಂಗಳೂರು ನಗರದಲ್ಲಿ ಒಂದು ಟೆಂಡರ್‌ನ್ನು ಫೈನಲೈಸ್ ಮಾಡಬೇಕಾದರೆ ಕನಿಷ್ಟ ಎರಡು ವರ್ಷಗಳ ಕಾಲ ನಿಗದಿಯಾಗುತ್ತಿದೆ. ಇದರಿಂದ ರಾಷ್ಟ್ರ ಮಟ್ಟದ ಯಾವುದೇ ಉತ್ತಮ ದರ್ಜೆಯ ಟೆಂಡರ್‌ದಾರರು ಬೆಂಗಳೂರು ನಗರಕ್ಕೆ ಬರುತ್ತಿಲ್ಲ. ಬೆಂಗಳೂರು ನಗರದಲ್ಲಿ ಜನಸಂಖ್ಯೆ ಬೆಳವಣಿಗೆ ಐದು ಪರ್ಸೆಂಟ್ ಇದೆ. ಪ್ರತಿ ವರ್ಷ ವಾಹನ ಬೆಳವಣಿಗೆ 27.8 ಪರ್ಸೆಂಟ್ ಇದೆ. ಬೆಂಗಳೂರು ಬೆಳವಣಿಗೆಗೆ ಹೋಲಿಕೆ ಮಾಡಿ ನೋಡಿದರೆ, ಹೈದರಾಬಾದ್‌ನಲ್ಲಿ 3.4 ಪರ್ಸೆಂಟ್‌ನಷ್ಟು ವಾಹನ ಬೆಳವಣಿಗೆ ಇದೆ, ಮದ್ರಾಸ್‌ನಲ್ಲಿ 3.7 ಪರ್ಸೆಂಟ್ ಇದೆ. ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ವಾಹನಗಳು 27.8 ಪರ್ಸೆಂಟ್ ರಿಜಿಸ್ಟ್ರೇಷನ್ ಆದರೆ ಹೈದರಾಬಾದ್‌ನಲ್ಲಿ 21 ಪರ್ಸೆಂಟ್ ರಿಜಿಸ್ಟ್ರೇಷನ್ ಆಗುತ್ತವೆ. ಮದ್ರಾಸ್‌ನಲ್ಲಿ ಪ್ರತಿ ವರ್ಷ 24 ಪರ್ಸೆಂಟ್ ರಿಜಿಸ್ಟ್ರೇಷನ್ ಆಗುತ್ತದೆ. ಬೆಂಗಳೂರು ನಗರದ ಒಟ್ಟು 15 ಮೀಟರ್ ಉದ್ದ ಇರತಕ್ಕಂತಹ ರಸ್ತೆಗಳು ಒಟ್ಟಾರೆ ಜನಸಂಖ್ಯೆಗೆ ಕೇವಲ 15 ಪರ್ಸೆಂಟ್‌ನಷ್ಟು ಬೆಂಗಳೂರಿನ ರಸ್ತೆಗಳು ವಿಶಾಲವಾಗಿವೆ. ಹೈದರಾಬಾದ್ ರಸ್ತೆಗಳು 24 ಪರ್ಸೆಂಟ್ ವಿಶಾಲವಾಗಿವೆ. ಮದ್ರಾಸ್ ರಸ್ತೆಗಳು 26 ಪರ್ಸೆಂಟ್‌ನಷ್ಟು ವಿಶಾಲವಾಗಿವೆ. ಆದರೆ, ಬೆಂಗಳೂರು ನಗರದಲ್ಲಿ ಪ್ರತಿನಿತ್ಯ 900 ವಾಹನಗಳು ರಿಜಿಸ್ಟ್ರೇಷನ್ ಆಗುತ್ತಿವೆ. ಹೈದರಾಬಾದ್‌ನಲ್ಲಿ 640 ವಾಹನಗಳು ರಿಜಿಸ್ಟ್ರೇಷನ್ ಆಗುತ್ತಿವೆ. ಮದ್ರಾಸ್‌ನಲ್ಲಿ 700 ವಾಹನಗಳು ರಿಜಿಸ್ಟ್ರೇಷನ್ ಆಗುತ್ತಿವೆ. ಆದರೆ, ಬೆಂಗಳೂರು ನಗರ ಎಲ್ಲಕ್ಕಿಂತ ಮೊದಲನೇ ಸ್ಥಾನದಲ್ಲಿದ್ದರೂ, ಬೆಂಗಳೂರು ನಗರದಲ್ಲಿ ಪ್ರಮುಖ ಕಾಮಗಾರಿಗಳ ಬೆಳವಣಿಗೆ ವರ್ಷಕ್ಕೆ ಪಾಯಿಂಟ್ ಆರು ಪರ್ಸೆಂಟ್ ಮಾತ್ರ ಆಗುತ್ತಿದೆ. ಹೈದರಾಬಾದ್‌ನಲ್ಲಿ ವರ್ಷಕ್ಕೆ 4.4ರಷ್ಟು ಕಾಮಗಾರಿಗಳೂ ಪೂರ್ಣಗೊಳ್ಳುತ್ತಿವೆ. ಮದ್ರಾಸ್‌ನಲ್ಲಿ 4.2ರಷ್ಟು ಕಾಮಗಾರಿಗಳೂ ಪೂರ್ಣಗೊಳ್ಳುತ್ತಿವೆ. ಎಲ್ಲಾ ರೀತಿಯಲ್ಲಿಯೂ ಅಂತರರಾಷ್ಟ್ರೀಯ ಬಂಡವಾಳದ ಡಿಮ್ಯಾಂಡ್ ಬೆಂಗಳೂರು ನಗರಕ್ಕೆ 24 ಪರ್ಸೆಂಟ್ ಇದೆ, ಹೈದರಾಬಾದ್‌ಗೆ 13 ಪರ್ಸೆಂಟ್ ಇದೆ, ಮದ್ರಾಸ್ ರಾಜ್ಯಕ್ಕೆ ಕೇವಲ 9 ಪರ್ಸೆಂಟ್ ಇದೆ. ಬೆಂಗಳೂರು ನಗರಕ್ಕೆ ಬಂಡವಾಳ ಹೂಡಿಕೆ 24 ಪರ್ಸೆಂಟ್ ಡಿಮ್ಯಾಂಡ್ ಇದ್ದರೂ ಸಹ ಬೆಂಗಳೂರಿನ ಮೂಲಭೂತ ಸೌಕರ್ಯಗಳು ಕೇವಲ ಆರು ಪರ್ಸೆಂಟ್ ವೇಗದಲ್ಲಿ ನಡೆಯುತ್ತಿವೆ. ಅದೇ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಏನು ಒಳಚರಂಡಿಗಳನ್ನು ಕಣಿವೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ, ಈ ಕಣಿವೆಗಳನ್ನು ಅಭಿವೃದ್ಧಿ ಮಾಡಲಿಕ್ಕೆ ನಾವು ಕಳೆದ ಮೂರು ವರ್ಷಗಳಿಂದ ಪ್ರಯತ್ನ ಪಡುತ್ತಿದ್ದೇವೆ, ಯಾವುದೇ ಕಾಮಗಾರಿಗಳು ಸುವ್ಯವಸ್ಥಿತ ರೀತಿಯಲ್ಲಿ ಜಾರಿಗೆ ಬಂದಿಲ್ಲ.

ಬೆಂಗಳೂರು ನಗರದಲ್ಲಿ ಇವತ್ತಿನವರೆಗೂ we have only one consultant. ಟ್ರಾಫಿಕ್ ಮ್ಯಾನೇಜ್‌ಮೆಂಟ್‌ಗೂ ಒಂದೇ ಕನ್‌ಸಲ್ಟೆಂಟ್, ಕಣಿವೆ ಮಾಡುವುದಕ್ಕೂ ಒಂದೇ ಕನ್‌ಸಲ್ಟೆಂಟ್. ಹಾಗಾಗಿ ಬೆಂಗಳೂರು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿದ್ದರೂ ನಮಗೆ ಸಮಸ್ಯೆ ಆಗಿದೆ.

ಅಧ್ಯಕ್ಷರು: ಚಂದ್ರಶೇಖರ್‌ರವರೇ, ಕ್ಲಾರಿಫಿಕೇಷನ್ ಕೇಳಿ ಎಂದರೆ ನೀವೇನು ಅದರ ಮೇಲೆ ಒಂದು ಲೆಕ್ಚರ್ ಪ್ರಾರಂಭ ಮಾಡಿದ್ದೀರಿ.

ಶ್ರೀ ಕೆ. ಚಂದ್ರಶೇಖರ್: ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಬೆಳವಣಿಗೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಕಾಳಜಿ ಇದೆ ಎನ್ನತಕ್ಕಂಥ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಷ್ಯಾ ಭೂಪಟದಲ್ಲಿ ಶಾಂಘೈ ಸಿಟಿ ನಮಗೆ ವ್ಯಾಪಾರದಲ್ಲಿ ಮತ್ತು ಬಂಡವಾಳದಲ್ಲಿ ಕಾಂಪಿಟೆಶನ್ ಮಾಡುತ್ತಿದೆ. 270 ಫ್ಲೈಓವರ್ ಅಲ್ಲಿದೆ. ಆದರೆ ಬೆಂಗಳೂರು ನಗರದಲ್ಲಿ 11 ಫ್ಲೈಓವರ್ ಇದೆ. ನಮ್ಮಲ್ಲಿ 360 ಬೆಳವಣಿಗೆಯಾಗುತ್ತಿದೆ. ಈಸ್ಟ್ ವೆಸ್ಟ್ ಕಾನ್‌ರ್, ನಾರ್ತ್–ಸೌತ್ ಕಾರಿಡಾರ್‌ಗಳ ಬಗ್ಗೆ ನಾವು ಮಾತನಾಡಿ ಐದು ವರ್ಷವಾಯಿತು. ಇವೊತ್ತಿನವರೆಗೂ ಆ ಕಾರ್ಯಕ್ರಮ ಬೆಂಗಳೂರು ನಗರದಲ್ಲಿ ಜಾರಿಗೆ ಬಂದಿಲ್ಲ. ಬರೇ ಮಾತೇ ಆಯಿತು ಹೊರತು ಬೆಂಗಳೂರು ಬೆಳವಣಿಗೆ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ.

ಶ್ರೀ ಬಿ.ಸಿ. ಪಾಟೀಲ್: ಈಗ ತಾವು ಹೇಳಿದಿರಿ. ಒಂದು ಟೆಂಡರ್‌ಗೆ ಎರಡು ವರ್ಷವಾಗುತ್ತಿದೆ ಎಂದು ಹೇಳಿದ್ದೀರಿ. ನಮ್ಮ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಾಗಿ ಇನ್ನೂ ನಲವತ್ತು, ಐವತ್ತು ದಿವಸಗಳೂ ಕೂಡ ಆಗಿಲ್ಲ. ನಿಮ್ಮ ಮುಖ್ಯಮಂತ್ರಿಗಳ ಕಾಲದಲ್ಲಿಯೇ ಅದು ಆಗಿರುವಂಥದ್ದು.

ಶ್ರೀ ಕೆ. ಚಂದ್ರಶೇಖರ್: ಇಲ್ಲಿ ನಾನು ಪರ ಅಥವಾ ವಿರುದ್ಧ ಎಂದು ಹೇಳುತ್ತಿಲ್ಲ. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ. ಇವೊತ್ತಿಗೂ ಸಹ ಬೆಂಗಳೂರು ನಗರದ ಬಗ್ಗೆ ಕರೆದಿರತಕ್ಕಂಥ ಟೆಂಡರ್‌ಗಳು ಒಂದೂವರೆ ವರ್ಷದಿಂದ ಕೊಳೆಯುತ್ತಾ ಬಿದ್ದಿದೆ. ದಯವಿಟ್ಟು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿರುವ ವಿಷಯದ ಬಗ್ಗೆ ಉತ್ತರ ನೀಡಿದ್ದೇನೆ. ಬೆಂಗಳೂರಿನ ರಸ್ತೆಗಳ ಅಭಿವೃದ್ಧಿ ಬಗ್ಗೆ ಈಗಾಗಲೇ ಡಾಂಬರೀಕರಣ ಪ್ಯಾಕೇಜಿನಲ್ಲಿ ಸುಮಾರು 85 ಪ್ಯಾಕೇಜ್ ಮತ್ತು ಮುಖ್ಯ ಆರ್ಟೀರಿಯಲ್ ರಸ್ತೆಗಳ ಉನ್ನತೀಕರಣಕ್ಕಾಗಿ 18 ಪ್ಯಾಕೇಜ್‌ಗಳಿಗೆ ಟೆಂಡರ್‌ನ್ನು ಕರೆಯಲಾಗಿದ್ದು ಈ ಪ್ಯಾಕೇಜ್‌ಗಳಿಂದ ಸುಮಾರು 400 ಕೀ.ಮೀ.ಗಳಷ್ಟು ವಾರ್ಡ್ ರಸ್ತೆಗಳು ಮತ್ತು ಪ್ರಮುಖ ಆರ್ಟೀರಿಯಲ್ ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿಶ್ವಬ್ಯಾಂಕ್ ನೆರವಿನಿಂದ ಸುಮಾರು 41 ಪ್ರಮುಖ ರಸ್ತೆಗಳನ್ನು ತೆಗೆದುಕೊಂಡಿದ್ದು ಈಗಾಗಲೇ ಕಾಮಗಾರಿಗಳು ಪ್ರಾರಂಭವಾಗಿದೆ. ಸುಮಾರು 29 ರಸ್ತೆಗಳನ್ನು ಐ.ಟಿ, ಬಿ.ಟಿ., ಸೆಕ್ಟಾರ್ ಮತ್ತು ಇತರೆ ಪ್ರಮುಖ ವಾಣಿಜ್ಯ ಕೇಂದ್ರಗಳಿಗೆ ಹೋಗುವ ರಸ್ತೆಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಇದಲ್ಲದೇ ಎಲ್ಲಾ ಪ್ರಮುಖ ಜಂಕ್ಷನ್‌ಗಳಲ್ಲಿ ಬಹಳ ಭಾರವಾದ ಟ್ರಾಫಿಕ್ ಸಾಂದ್ರತೆಯನ್ನು ಸಡಿಲಗೊಳಿಸಲು ಹಲವಾರು ಗ್ರೇಡ್ ಸೆಪರೇಟರ್‌ಗಳ

ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಹಾಗೂ 2006–07ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಹಲವಾರು ಗ್ರೇಡ್ ಸೆಪರೇಟರ್‌ಗಳ ಬಗ್ಗೆ ಈಗಾಗಲೇ ಸೇರ್ಪಡೆಯಾಗಿವೆ. ಪ್ರಮುಖವಾಗಿ 30 ಕಿ.ಮೀ. ಉದ್ದ ಒಳ ವರ್ತುಲ ರಸ್ತೆ ಬೆಂಗಳೂರು ನಗರದಲ್ಲಿ ನಿರ್ಮಿಸಲು ಈಗಾಗಲೇ ಯೋಜನಾ ವರದಿಯನ್ನು ತಯಾರಿಸಿದ್ದು ಈ ಯೋಜನೆಯ ಅನುಷ್ಠಾನದ ಬಗ್ಗೆ ಚರ್ಚೆಯು ಅಂತಿಮ ಹಂತದಲ್ಲಿದೆ. ಬೆಂಗಳೂರು ಮಹಾನಗರಪಾಲಿಕೆಯು ನಗರದಲ್ಲಿ 90 ಪ್ರಮುಖ ರಸ್ತೆಗಳನ್ನು ಅಗಲೀಕರಣ ಮಾಡುವುದಕ್ಕೆ ಗುರುತಿಸಿದ್ದು ಮೊದಲನೆಯ ಹಂತದಲ್ಲಿ 45 ರಸ್ತೆಗಳನ್ನು ಅಗಲೀಕರಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಮೇಲೆ ತಿಳಿಸಿದಂಥ ಮೂಲಭೂತ ಸೌಕರ್ಯಗಳ ಅನುಷ್ಠಾನದಿಂದ ಹೆಚ್ಚುತ್ತಿರುವ ವಾಹನ ಸಂಚಾರವನ್ನು ಸುಗಮಗೊಳಿಸಬಹುದಾಗಿದೆ. ಇದಲ್ಲದೆ ಈ ಎಲ್ಲಾ ಯೋಜನೆಗಳಿಗೆ ಹಣಕಾಸಿನ ಸಹಾಯಕ್ಕಾಗಿ ಕೇಂದ್ರ ಸರ್ಕಾರವು ಇತ್ತೀಚೆಗೆ ರಚಿಸಿ ಅನುಷ್ಠಾನಗೊಳಿಸಿರುವ ಜವಹರ್‌ಲಾಲ್ ನೆರಹೂ ಅರ್ಬನ್ ರಿನ್ಯೂವಲ್ ಮಿಶನ್‌ಗೆ ರಾಜ್ಯ ಸರ್ಕಾರದ ನೋಡಲ್ ಏಜೆನ್ಸಿಯಾದ ಕೆ.ಯು.ಐ.ಡಿ.ಎಫ್.ಸಿ. ಮೂಲಕ ಪ್ರಸ್ತಾವನೆ ಸಲ್ಲಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಶ್ರೀ ಕೆ. ಚಂದ್ರಶೇಖರ್: ಮಾನ್ಯ ಮುಖ್ಯಮಂತ್ರಿಗಳೇ, ತಾವು ಹೇಳಿರುವ ಮಾಹಿತಿ ಎಲ್ಲಾ ಸರಿ ಇದೆ. ಆದರೆ ತಮ್ಮಲ್ಲಿ ಮನವಿ ಏನೆಂದರೆ, ಇದು ಕಾರ್ಯರೂಪಕ್ಕೆ ಬರುತ್ತಿಲ್ಲ. ದಯವಿಟ್ಟು ತಾವು ಇದರ ಬಗ್ಗೆ ಗಮನ ಹರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಕಾರ್ಯರೂಪಕ್ಕೆ ಬಂದರೆ ಬಹಳ ಸಂತೋಷವಾಗುತ್ತದೆ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಈ ಗಮನ ಸೆಳೆಯುವ ಸೂಚನೆಗೆ ನಾನೂ ಕೂಡ ಸಹಿ ಮಾಡಿರುವುದರಿಂದ ದಯವಿಟ್ಟು ನನಗೂ ಒಂದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಒಂದು ಗಮನ ಸೆಳೆಯುವ ಸೂಚನೆಗೇ ನೀವು 15 ನಿಮಿಷ ತೆಗೆದುಕೊಂಡು ಬಿಟ್ಟರೆ ಹೇಗೆ, ಮಾತನಾಡಿ ಬೇಗ ಮುಗಿಸಿ.

ಶ್ರೀ ನೆ.ಲ. ನರೇಂದ್ರಬಾಬು(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಇವೊತ್ತು ಬೆಂಗಳೂರಿನಲ್ಲಿ ಪ್ರಸ್ತುತ ಇರತಕ್ಕಂಥ ರಸ್ತೆಗಳು ಕೇವಲ 10 ಲಕ್ಷ ಇದ್ದಿದ್ದು ಇವೊತ್ತು 23 ಲಕ್ಷಕ್ಕೆ ಬೆಳೆದಿರತಕ್ಕಂಥದ್ದು ಸಂಗತಿಯಾಗಿದೆ. ಆದರೆ ಒಂದು ಸಣ್ಣ ಒಂದು ಉಲ್ಲೇಖಕೊಟ್ಟು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ. ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಬಹುಶಃ ತಮಗೆಲ್ಲರಿಗೂ ಗೊತ್ತಿರಬಹುದು. . .

ಅಧ್ಯಕ್ಷರು: ಕೇವಲ ಕ್ಲಾರಿಫಿಕೇಶನ್ ಕೇಳಬೇಕು. ಸುಮ್ಮನೇ ಹೀಗೆ ಭಾಷಣ ಮಾಡುತ್ತಾ ಹೋದರೆ ಹೇಗೆ?

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಏಕೆ ಕೆಲಸಗಳು ವಿಳಂಬವಾಗುತ್ತದೆ ಎಂಬುದಕ್ಕೇ ಹೇಳುತ್ತಿದ್ದೇನೆ. Devaraj Urs Truck Terminal ಎಂದು ಹೇಳು ಸುಮಾರು 3500 ಲಾರಿಗಳು ನಿಲ್ಲತಕ್ಕಂಥ ಒಂದು Devaraj Urs Truck Terminal ಅನ್ನು ಇದುವರೆಗೂ ನಮಗೆ ಪೂರ್ಣ ಮಾಡುವುದಕ್ಕೆ ಆಗಿಲ್ಲ. ಇವೊತ್ತು ಬೆಂಗಳೂರು ಸುತ್ತಮುತ್ತ ಬಹಳಷ್ಟು Truck Terminal ಮಾಡಬೇಕಾಗುತ್ತದೆ. Within Bangalore City ಬರತಕ್ಕಂಥ ಲಾರಿಗಳನ್ನು ಅವಾಯ್ಡ್

ಮಾಡಿ ಹೊರಗಡೆಯೇ ನಿಲ್ಲಿಸಿ ಅಲ್ಲಿಂದ ಅನ್‌ಲೋಡ್ ಮಾಡಿಕೊಂಡು ಅಲ್ಲಿಂದಲೇ ಒಳಗಡೆ ಆಗುತ್ತಿಲ್ಲ. ಸುಮಾರು ನಾನು ಶಾಸಕನಾದ ದಿವಸದಿಂದಲೇ ನಾನು ಕೇಳುತ್ತಿದ್ದೇನೆ, ಅದೂ ಕೇಂದ್ರ ಸರ್ಕಾರದ ನೆರವಿದ್ದರೂ ಸಹ ಯಾವ ಕೆಲಸವೂ ಆಗಿಲ್ಲ ನಮ್ಮಲ್ಲಿ ನಾನು ಮುಖ್ಯ ಕಾರ್ಯದರ್ಶಿಗಳನ್ನು ಇದರ ಬಗ್ಗೆ ಎರಡ್ಮೂರು ಸಲ ಭೇಟಿ ಮಾಡಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಹಲವಾರು ಸಂದರ್ಭಗಳಲ್ಲಿ ಕಳೆದ ಎರಡು ವರ್ಷಗಳ ಹಿಂದಿನಿಂದ ಇದರ ಬಗ್ಗೆ ಹೇಳುತ್ತಿದ್ದೇನೆ. ನಮ್ಮ ಅಧಿಕಾರಿಗಳು ಮನಸ್ಸು ಕೊಡದೇ ಇರುವುದರಿಂದ ಎಷ್ಟೋ ಕೆಲಸಗಳು ಇವೊತ್ತು ಆಗುತ್ತಿಲ್ಲ. Devaraj Urs Truck Terminal ನಲ್ಲಿ ಸುಮಾರು ಒಂದೊಂದು ಲಾರಿ ಹತ್ತತ್ತು ಕೋಟಿ ರೂಪಾಯಿಗಳನ್ನು ವರ್ಷಕ್ಕೆ ವಹಿವಾಟು ಮಾಡಿದರೂ ಸಹ ಸುಮಾರು 30 ಸಾವಿರ ಕೋಟಿ ರೂ. ರಫ್ತು ಆಗತಕ್ಕಂಥದ್ದು ಮತ್ತು ನಮ್ಮ ರಾಜ್ಯದೊಳಗೆ ಮತ್ತು ದೇಶದೊಳಗೆ ಸಂಚಾರ ಮಾಡತಕ್ಕಂಥ ವಹಿವಾಟಾಗುತ್ತದೆ. ಹಣ ಪಡೆಯಬಹುದಾಗಿತ್ತು. ಮಾಡುತ್ತಿಲ್ಲ. ನಾನು ಬೆಂಗಳೂರು ನಗರದಲ್ಲಿ ಟೈಂಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಕಡೆ ಹೇಳುತ್ತಾರೆ, ನ್ಯೂಯಾರ್ಕ್ ಸಿಟಿಗೆ ಇವೊತ್ತು . . .

ಅಧ್ಯಕ್ಷರು: ನರೇಂದ್ರಬಾಬು ರವರೇ, ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ. ಹೀಗೆ ಮಾತನಾಡುತ್ತಿದ್ದರೆ ನಾನು ಬೇರೆಯವರನ್ನು ಮಾತನಾಡಲು ಕರೆಯುತ್ತೇನೆ. ಏನಿದು? ಕ್ಲಾರಿಫಿಕೇಶನ್ ಮಾತ್ರ ಕೇಳಿ ಎಂದರೆ ನೀವು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲು ಹೊರಟಿದ್ದೀರಿ. ಗಮನ ಸೆಳೆಯುವ ಸೂಚನೆ ಮಾಡಿದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದಲ್ಲದೆ ಬೇರೆ ನಿಮ್ಮ ಸ್ನೇಹಿತರುಗಳೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಮಾತ್ರ ಕೇಳಿ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಇವರು ಟ್ರಾಫಿಕ್ ಟಾಸ್ಕ್‌ಫೋರ್ಸ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಶಾಸಕರು ಇಷ್ಟು ಜನ ಇದ್ದೇವೆ. ಯಾವುದಾದರೂ ಒಂದು ಟ್ರಾಫಿಕ್ ಪೋರ್ಸನ್ನು ತೋರಿಸಲು, ನಾನೂ ಬೆಂಗಳೂರು ನಗರದಲ್ಲಿ 14 ವರ್ಷದಿಂದ ಇದ್ದೇನೆ, ಯಾವುದಾದರೂ ಒಂದು Traffic Task Force ಆಗಿದೆಯೇ ಅಥವಾ ಮೀಟಿಂಗ್ ಆಗಿದೆಯೇ? ಕಣ್ಣಿಗೆ ಮಣ್ಣೆರಚ್ಚತಕ್ಕಂಥದ್ದಲ್ಲ, ಗೊತ್ತಾಗಬೇಕು. ನಾನು ಹೇಳುತ್ತೇನೆ ಬೆಂಗಳೂರು ನಗರದಲ್ಲಿ de-congestionಗೆ ಏನೇನು ಸ್ಟೆಪ್ಸ್ ಮಾಡಿದ್ದೇವೆ, ಏನೇನು ಮಾಡಬೇಕು, ನಾರ್ತ್–ಸೌತ್ ಕಾರಿಡಾರ್ ಆಗಲಿ, ಈಸ್ಟ್ ವೆಸ್ಟ್ ಮಾಡಿ ಕಾರಿಡಾರ್ ಆಗಲಿ, ಅಥವಾ ಸಂಚಾರದ ಬಗ್ಗೆ de-congestionಗೆ ಏನೇನು ಸ್ಟೆಪ್ಸ್ ತೆಗೆದುಕೊಳ್ಳಬೇಕು? ಇವೊತ್ತು ಮಾಡಿದ್ದ ಪಂಚಾವಾರ್ಷಿಕ ಅಲ್ಲ, ಐದೈದು, ಹತ್ತತ್ತು, ಹದಿನೈದು, ಮೂವತ್ತು ವರ್ಷವಾದರೂ Devaraj Urs Truck Terminal ಇದುವರೆಗೂ ಪೂರ್ಣ ಆಗಲಿಲ್ಲ. ಇವೊತ್ತು ಸುತ್ತಮುತ್ತ ಏನಾಗುತ್ತಿವೆಯೆಂದರೆ, ಎ.ಪಿ.ಎಂ.ಸಿ., ಆರ್.ಎಂ.ಸಿ. ಈ ಎಲ್ಲಾ ಕಡೆ ಲಾರಿಗಳಿಂದ ಕಂಜೆಸ್ಟ್ ಆಗುತ್ತಿದೆ. ಇವೊತ್ತು ನನ್ನ ಏರಿಯಾದಲ್ಲಿ . . . . .

ಅಧ್ಯಕ್ಷರು: ಈ ರೀತಿಯಾದರೆ ನಾವೇನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಸಮಸ್ಯೆಗಳನ್ನು ಹಾಗೂ ಇತರ ಸಮಸ್ಯೆಗಳನ್ನು ಇಲ್ಲಿ ಎತ್ತಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಆದರೆ ಗಮನ ಸೆಳೆಯುವ ಸೂಚನೆ ಮುಖಾಂತರ ಅಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಿಮಗೆ ಸಹಾಯ ಮಾಡುವುದಕ್ಕೆ ನಾನು ಏನು ಹೇಳುತ್ತೇನೆಂದರೆ, ನರೇಂದ್ರಬಾಬುರವರಿಗೆ ಗೊತ್ತಿಲ್ಲ What he is doing is not correct. ಈ ರೀತಿಯಾದರೆ ಸದನ ನಡೆಸುವುದಕ್ಕೆ ನಿಮಗೆ ಬಹಳ ಕಷ್ಟವಾಗುತ್ತದೆ. ತಾವು ಹತ್ತು ನಿಮಿಷ ಡೆಮ್ಯಟಿ ಸ್ಪೀಕರ್‌ರವರನ್ನು ಕೂರಿಸಿ ಇವರಿಗೆ ಐದು ನಿಮಿಷಕಾಲ ನಿಮ್ಮ ಟೀ ರೂಂನಲ್ಲಿ ಕೂರಿಸಿಕೊಂಡು ನಿಮ್ಮ ಆಫೀಸರ್ಸ್ ಇಟ್ಟಿಕೊಂಡು ಅವರಿಗೆ ಬ್ರೀಫಿಂಗ್ ಕೊಟ್ಟರೆ ಸುಲಭ. ಅವರಿಗೆ lack of training. ಅವರಿಗೆ ಐಡಿಯಾ ಇಲ್ಲ.

ಅಧ್ಯಕ್ಷರು: ಐಡಿಯಾ ಇಲ್ಲಾ ಅಂತಲ್ಲ. ಅವರಿಗೆ ಏನು ಅಂದರೆ ಅವರ ಸಮಸ್ಯೆಗಳನ್ನು ಎತ್ತಿ ಚರ್ಚೆ ಮಾಡಬೇಕು. ಅವರ ಈ ಒಂದು ಆಸಕ್ತಿ ಏನಿದೆ ಅದನ್ನು ಮೆಚ್ಚತಕ್ಕಂಥದ್ದೇ ಆಗಿದೆ. ಆದರೆ ಗಮನ ಸೆಳೆಯುವ ಸೂಚನೆ ಮುಖಾಂತರ ಈ ರೀತಿ ಭಾಷಣ ಮಾಡಿದರೆ ಹೇಗೆ? ಬಜೆಟ್ ಮೇಲೆ ಅವರು ಮಾತನಾಡುಬಹುದು. ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ. ಆಗ ಅದರ ಬಗ್ಗೆ ಮಾತನಾಡಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕಾಲಿಂಗ್ ಅಟೆನ್‌ಶನ್ ಬಗ್ಗೆ ಇರುವ ಇತಿಮಿತಿ ಕಲ್ಪನೆ ಅವರಿಗೆ ಇಲ್ಲ. ಎಲ್ಲೋ ಒಂದು ಕಡೆಗೆ ನವು ಅವರಿಗೆ ಟ್ರೈನಿಂಗ್ ಕೊಡುವುದರಲ್ಲಿ ವಿಫಲರಾಗಿದ್ದೇವೆ. You must evince personally.

ಅಧ್ಯಕ್ಷರು: ಟ್ರೈನಿಂಗ್‌ನ್ನು ಮೊದಲು ಕೊಟ್ಟಿದ್ದೇವೆ. ಏನಾಯ್ತು ಕೇಳಿ.

ಶ್ರೀ ನೆ.ಲ. ನರೇಂದ್ರಬಾಬು: ಬೆಂಗಳೂರು ನಗರದಲ್ಲಿ 70 ಲಕ್ಷ ಜನರು ಸಫರ್ ಆಗುತ್ತಿದ್ದಾರೆ.

ಅಧ್ಯಕ್ಷರು: ಆಯ್ತು, ಕ್ಲಾರಿಫಿಕೇಶನ್ ಮಾತ್ರ ಕೇಳಿ ಎಂದು ಹೇಳುತ್ತಿರುವುದು.

ಶ್ರೀ ನೆ.ಲ. ನರೇಂದ್ರಬಾಬು: ಸಮಯ ವೇಸ್ಟ್ ಆಗುತ್ತಿದೆ. ಹಣ ವೇಸ್ಟ್ ಆಗುತ್ತಿದೆ. ಇದರ ದೃಷ್ಟಿ ಇಟ್ಟುಕೊಂಡು ಈ ಕೆಲಸಗಳನ್ನು ಮಾಡಬಹುದಾಗಿತ್ತಲ್ಲಾ. ಮಾಡಲಿಕ್ಕೆ ಈ ಸರ್ಕಾರ ಆ ಸರ್ಕಾರ ಎಂದಲ್ಲ. ಇಂಥ ಯೋಜನೆಗಳು ನೆನಗುದಿಗೆ ಬೀಳುತ್ತಿವೆಯಲ್ಲಾ. ಕೇವಲ Devaraj Urs Truck Terminal ಒಂದನ್ನು ಇದುವರೆಗೆ ಮಾಡುವುದಕ್ಕೆ ಆಗಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖೇನ ವಿನಂತಿ ಮಾಡುತ್ತೇನೆ. ಮುಖ್ಯ ಕಾರ್ಯದರ್ಶಿಗಳು ಕ್ರಮ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಏನು ನ್ಯೂನತೆಗಳು ಇವೆ ಅವುಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಈ) ವಿಷಯ: ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಆಕಾಲಿಕ ಮಳೆಯಿಂದ ರೈತರಿಗಾಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ.

ಶ್ರೀ ಬಸವರಾಜ ರಾಯರೆಡ್ಡಿ(ಯಲಬುರ್ಗ): ಮಾನ್ಯ ಅಧ್ಯಕ್ಷರೆ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಆಕಾಲಿಕ ಮಳೆಯಿಂದ ರೈತರಿಗಾಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.